## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 956
2. ಸದಸ್ಯರ ಹೆಸರು : ಶ್ರೀ ಪಿ.ಆರ್.ರಮೇಶ್
3. ಉತ್ತರಿಸಬೇಕಾದ ದಿನಾಂಕ : 28.09.2020
4. ಉತ್ತರಿಸುವ ಸಚಿವರು : ಕಾರ್ಮಿಕ ಮತ್ತು ಸಕ್ಕರೆ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ರೈತರು ಬೆಳೆದ ಕಬ್ಬಿನ ಬೆಳೆಯನ್ನು ನುರಿಯಲು ಎಷ್ಟು ಸಕ್ಕರೆ ಕಾರ್ಖಾನೆಗಳಿವೆ; (ಜಿಲ್ಲಾವಾರು ವಿವರ ನೀಡುವುದು)</td><td>ರಾಜ್ಯದಲ್ಲಿ ಒಟ್ಟು 86 ನೋಂದಾಯಿತ ಸಕ್ಕರೆ ಕಾರ್ಖಾನೆಗಳಿದ್ದು, ಈ ಪೈಕಿ ರೈತರು ಬೆಳೆದ ಕಬ್ಬಿನ ಬೆಳೆಯನ್ನು ನುರಿಯಲು 62 ಸಕ್ಕರೆ ಕಾರ್ಖಾನೆಗಳು 2019-20ನೇ ಹಂಗಾಮಿಗೆ ಕಾರ್ಯನಿರ್ವಹಿಸಿವೆ. ಇವುಗಳ ವಲಯವಾರು ಮಾಹಿತಿ ಕೆಳಕಂಡಂತಿದೆ.
<table>
<tr><th>ಕ್ರ.ಸಂ</th><th>ವಲಯ</th><th>ಕಾರ್ಯನಿರತ</th><th>ಸ್ಥಗಿತ</th><th>ಸಮಾಪನೆ</th><th>ಒಟ್ಟು</th></tr>
<tr><td>1</td><td>ಸಾರ್ವಜನಿಕ ವಲಯ</td><td>-</td><td>02</td><td>-</td><td>02</td></tr>
<tr><td>2</td><td>ಜಂಟಿ ವಲಯ</td><td>-</td><td>-</td><td>01</td><td>01</td></tr>
<tr><td>3</td><td>ಸಹಕಾರಿ ವಲಯ</td><td>12</td><td>04</td><td>06</td><td>22</td></tr>
<tr><td>4</td><td>ಸಹಕಾರಿ ವಲಯ (ಗುತ್ತಿಗೆ)</td><td>06</td><td>01</td><td>-</td><td>07</td></tr>
<tr><td>5</td><td>ಖಾಸಗಿ ವಲಯ</td><td>44</td><td>10</td><td>-</td><td>54</td></tr>
<tr><td colspan="2">ಒಟ್ಟು</td><td>62</td><td>17</td><td>07</td><td>86</td></tr>
</table>
ಜಿಲ್ಲಾವಾರು ಕಾರ್ಯನಿರತ ಸಕ್ಕರೆ ಕಾರ್ಖಾನೆಗಳಿಗೆ "ಅನುಬಂಧ" ರಲ್ಲಿ ಒದಗಿಸಿದೆ.</td></tr>
<tr><td>ಆ)</td><td>ಬೆಳಗಾವಿ ಜಿಲ್ಲೆಯಲ್ಲಿ ರೈತರು ಬೆಳೆದ ಕಬ್ಬಿಗೆ ವಿವಿಧ ಕಾರ್ಖಾನೆಗಳು ವಿಭಿನ್ನ ರೀತಿಯಲ್ಲಿ ಬೆಲೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ನಿಲುವೇನು;</td><td rowspan="2">ಬಂದಿದೆ.<br>ಪ್ರತಿ ವರ್ಷ ರೈತರಿಗೆ ಪಾವತಿಸಬೇಕಾಗಿರುವ ಕಬ್ಬಿನ ದರವನ್ನು ಕೇಂದ್ರ ಸರ್ಕಾರವು ಒಂದು ವರ್ಷ ಮುಂಚಿತವಾಗಿ ಘೋಷಿಸಿರುತ್ತದೆ. ಈ ರೀತಿ ದರ ಘೋಷಿಸುವ ಮೊದಲು ಕೃಷಿ ಬೆಲೆ ಮತ್ತು ವೆಚ್ಚ ಆಯೋಗ– CACP (Commission for Agriculture Costs and Prices) ಕಬ್ಬು ಬೆಳೆಯಲು ತಗಲಬಹುದಾದ ಎಲ್ಲಾ ರೀತಿಯ ವೆಚ್ಚಗಳನ್ನು ಗಣನೆಗೆ ತೆಗೆದುಕೊಂಡು ರೈತರಿಗೆ ಲಾಭದಾಯಕ ಬೆಲೆ ದೊರಕುವಂತೆ ಘೋಷಣೆ ಮಾಡಲಾಗುತ್ತದೆ.<br>ಕಬ್ಬು (ನಿಯಂತ್ರಣ) ಆದೇಶ 1966ರ ಖಂಡ (3)ರ ಅವಕಾಶದಂತೆ ಕೇಂದ್ರ ಸರ್ಕಾರವು ಪ್ರತಿ ಹಂಗಾಮು ಪ್ರಾರಂಭವಾಗುವ ಮೊದಲೇ ಪ್ರತಿ ಸಕ್ಕರೆ ಹಂಗಾಮಿಗೆ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು ನಿಗದಿಗೊಳಿಸಿ ಘೋಷಿಸುತ್ತದೆ. ಸದರಿ ಕೇಂದ್ರ ಸರ್ಕಾರದ ಆದೇಶದ ಆಧಾರದ ಮೇಲೆ ರಾಜ್ಯ ಸರ್ಕಾರವು ಜಾರಿಗೊಳಿಸಿರುವ ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ 2013, ತಿದ್ದುಪಡಿ ಅಧಿನಿಯಮ 2014ರ ಕಲಂ 4(ಎ) ರೀತ್ಯಾ ರಾಜ್ಯದ ಸಕ್ಕರೆ ಕಾರ್ಖಾನೆಗಳ ಸಕ್ಕರೆ ಇಳುವರಿಯನ್ನು ಆಧರಿಸಿ ಪ್ರತಿಯೊಂದು ಕಾರ್ಖಾನೆಯು ಪಾವತಿಸಬೇಕಾದ ಎಫ್.ಆರ್.ಪಿ.ದರವನ್ನು ಘೋಷಣೆ ಮಾಡುವ ಪದ್ಧತಿ ಜಾರಿಯಲ್ಲಿದೆ.<br>ಕೇಂದ್ರ ಸರ್ಕಾರವು 2019-20ನೇ ಸಕ್ಕರೆ ಹಂಗಾಮಿಗೆ ಈ ಕೆಳಗಿನಂತೆ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು (FRP) ನಿಗದಿಪಡಿಸಿದೆ.<br>1) ಶೇ. 10ರಷ್ಟು ಸಕ್ಕರೆ ಇಳುವರಿಗೆ ಪ್ರತಿ ಮೆ. ಟನ್ ಕಬ್ಬಿಗೆ ರೂ.2750/-<br>2) ಶೇ.10 ಕ್ಕೆ ಮೇಲ್ಪಟ್ಟು ಸಕ್ಕರೆ ಇಳುವರಿಗೆ ನಂತರದ ಶೇ.1ರಷ್ಟು ಇಳುವರಿಗೆ ಪ್ರತಿ ಮೆ.ಟನ್ ಕಬ್ಬಿಗೆ ರೂ.275/- ರಂತೆ ಹೆಚ್ಚುವರಿ ಬೆಲೆ.<br>3) ಶೇ.10ಕ್ಕಿಂತ ಕಡಿಮೆ ಹಾಗೂ ಶೇ.9.5ಕ್ಕೆ ಮೇಲ್ಪಟ್ಟು ಇಳುವರಿ ಹೊಂದಿರುವ ಸಕ್ಕರೆ ಕಾರ್ಖಾನೆಗಳಿಗೆ ಶೇ.1 ರಷ್ಟು ಇಳುವರಿಗೆ ಪ್ರತಿ ಮೆ.ಟನ್ ರೂ.275ರ ಸರಾಸರಿಯಂತೆ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು ಕಡಿಮೆ ಮಾಡುವುದು.<br>4) ಶೇ.9.5 ಕ್ಕಿಂತ ಕಡಿಮೆ ಇಳುವರಿ ಹೊಂದಿರುವ ಕಾರ್ಖಾನೆಗಳಿಗೆ ಪ್ರತಿ ಮೆ. ಟನ್‌ಗೆ ರೂ.2612.50ಗಳ ನ್ಯಾಯ ಮತ್ತು ಲಾಭದಾಯಕ ಬೆಲೆ</td></tr>
<tr><td>ಇ</td><td>ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ರೈತರು ಬೆಳೆದ ಕಬ್ಬಿಗೆ ಏಕರೂಪ ಬೆಲೆ ನಿಗಧಿಪಡಿಸಲು ಸರ್ಕಾರದ ಕ್ರಮವೇನು;(ವಿವರ ನೀಡುವುದು)</td></tr>
</table>

| | | |
|---|---|---|
| | | ಅದರಂತೆ ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳ 2018-19ನೇ ಸಾಲಿನ ಸಕ್ಕರೆ ಇಳುವರಿಯನ್ನು ಆಧಾರವಾಗಿಟ್ಟುಕೊಂಡು ಕಬ್ಬು ನಿಯಂತ್ರಣ ಮಂಡಳಿ ಸಭೆಯಲ್ಲಿ ನಿರ್ಣಯ ಕೈಗೊಂಡು ದಿನಾಂಕ: 08.10.2019 ರಂದು ಅಧಿಸೂಚನೆ ಹೊರಡಿಸಿ ಪ್ರತಿ ಕಾರ್ಖಾನೆಗೆ ಎಫ್.ಆರ್.ಪಿ.ಯಂತೆ ಕಬ್ಬು ದರವನ್ನು ಪಾವತಿಸುವಂತೆ ನಿರ್ದೇಶನ ನೀಡುವುದರ ಮೂಲಕ ಜಾರಿಗೊಳಿಸಲಾಗಿದೆ.<br><br>ಈ ಮೇಲಿನಂತೆ ಸರ್ಕಾರವು ವೈಜ್ಞಾನಿಕವಾಗಿ ಕಬ್ಬಿಗೆ ಬೆಲೆಯನ್ನು ನಿಗದಿಪಡಿಸುವ ಪದ್ಧತಿ ಅಳವಡಿಸಿಕೊಂಡಿರುತ್ತದೆ.<br><br>ಬೆಳಗಾವಿ ಜಿಲ್ಲೆಯಲ್ಲಿ ರೈತರು ಬೆಳೆದ ಕಬ್ಬಿಗೆ 2019-20ನೇ ಹಂಗಾಮಿನಲ್ಲಿ ಕೇಂದ್ರ ಸರ್ಕಾರದ ಎಫ್. ಆರ್.ಪಿ ದರದಂತೆ ಸಕ್ಕರೆ ಕಾರ್ಖಾನೆಯ ಇಳುವರಿ ಆಧರಿಸಿ ಕಬ್ಬಿನ ಬೆಲೆ ನಿಗದಿಪಡಿಸುವುದರಿಂದ ಕಾರ್ಖಾನೆಯಿಂದ ಕಾರ್ಖಾನೆಗೆ ಕಬ್ಬಿನ ದರವು ಬೇರೆ ಬೇರೆಯಾಗಿರುತ್ತದೆ. |
| ಈ) | ಕಬ್ಬಿನ ಕಾರ್ಖಾನೆಗಳು ತ್ಯಾಜ್ಯ ವಸ್ತುಗಳ ಸಮರ್ಪಕ ವಿಲೇವಾರಿಗೆ ಸರ್ಕಾರ ರಾಜ್ಯದ ವಾಯು ಮಾಲಿನ್ಯ ಇಲಾಖೆ/ಸಂಸ್ಥೆಗಳ ಮತ್ತು ಸರ್ಕಾರೇತರ ಪರಿಸರ ವಾದಿಗಳ ಸಂಸ್ಥೆಗಳ ಪ್ರತಿನಿಧಿಗಳನ್ನು ಒಳಗೊಂಡಂತೆ ಸಮನ್ವಯ ಸಮಿತಿ ರಚಿಸಿ ಕಾರ್ಖಾನೆಗಳಿಂದ ಮಾಲಿನಯ ತಡೆಗೆ ಕ್ರಮ ವಹಿಸಲು ಸರ್ಕಾರ ಚಿಂತಿಸಿದೆಯೇ? (ವಿವರ ನೀಡುವುದು) | ಕಬ್ಬಿನ ಕಾರ್ಖಾನೆಗಳು ತ್ಯಾಜ್ಯ ವಸ್ತುಗಳ ಸಮರ್ಪಕ ವಿಲೇವಾರಿಗೆ ರಾಜ್ಯದ ವಾಯುಮಾಲಿನ್ಯ ಇಲಾಖೆ /ಸಂಸ್ಥೆಗಳ ಮತ್ತು ಸರ್ಕಾರೇತರ ಪರಿಸರವಾದಿಗಳ ಸಂಸ್ಥೆಗಳ ಪ್ರತಿನಿಧಿಗಳನ್ನು ಒಳಗೊಂಡಂತೆ ಸಮನ್ವಯ ಸಮಿತಿ ರಚಿಸುವ ಪ್ರಸ್ತಾವನೆ ಪ್ರಸ್ತುತ ಸರ್ಕಾರದ ಮುಂದೆ ಇರುವುದಿಲ್ಲ.<br><br>ಮುಂದುವರಿದಂತೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 1974ರ ಜಲ ಕಾಯ್ದೆಅಡಿಯಲ್ಲಿ ಸ್ಥಾಪನೆಗೊಂಡಿದ್ದು, ಜಲ (ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1974 ಹಾಗೂ ವಾಯು (ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1981ನ್ನು ಅನುಷ್ಠಾನಗೊಳಿಸಿದೆ. ಉದ್ದಿಮೆಗಳನ್ನು (ಸಕ್ಕರೆ ಕಾರ್ಖಾನೆಗಳಿಗೆ) ಸ್ಥಾಪಿಸುವ ಮುನ್ನ ಮಂಡಳಿಯು ಸ್ಥಾಪನಾ ಸಮ್ಮತಿ ಪತ್ರ ನೀಡುತ್ತದೆ ಕಾರ್ಖಾನೆ ನಡೆಸಲು ಚಾಲನಾ ಸಮ್ಮತಿ ಪತ್ರವನ್ನು ನೀಡುತ್ತದೆ.<br><br>ಮಂಡಳಿಯ ಸಂಬಂಧಪಟ್ಟ ಪ್ರಾದೇಶಿಕ ಅಧಿಕಾರಿಗಳು ಉದ್ದಿಮೆಗಳಿಗೆ (ಸಕ್ಕರೆ ಕಾರ್ಖಾನೆಗಳಿಗೆ) ಕಾಲ ಕಾಲಕ್ಕೆ ಭೇಟಿ ನೀಡಿ ಜಲ ಕಾಯ್ದೆ 1974, ವಾಯು ಕಾಯ್ದೆ 1981 ಮತ್ತು ತ್ಯಾಜ್ಯ ವಸ್ತುಗಳ ವೈಜ್ಞಾನಿಕ ರೀತಿಯಲ್ಲಿ ನಿರ್ವಹಣೆಗಾಗಿ ವಿಧಿಸಿರುವ ಷರತ್ತುಗಳನ್ನು ಪಾಲಿಸುತ್ತಿರುವ ಬಗ್ಗೆ ಪರಿಶೀಲನೆ ಮಾಡುತ್ತಿರುತ್ತಾರೆ.<br><br>ಸ್ಥಾಪನ ಅನುಮತಿ/ಚಾಲನಾ ಸಮ್ಮತಿ ಪತ್ರದಲ್ಲಿ ವಿಧಿಸಿದ ಷರತ್ತುಗಳನ್ನು ಉಲ್ಲಂಘಿಸಿದ ಉದ್ದಿಮೆಗಳ ವಿರುದ್ಧ ಮಂಡಳಿಯು ಜಲ ಕಾಯ್ದೆ 1974 ಹಾಗೂ ವಾಯು ಕಾಯ್ದೆ 1981ರಡಿಯಲ್ಲಿ ಕಾನೂನು ರೀತಿ ಕ್ರಮಕೈಗೊಳ್ಳುತ್ತಿದೆ. |

ಸಂಖ್ಯೆ: ಸಿಐ 205 ಸಿಓಎಫ್ 2020

(ಅರಬೈಲ್ ಶಿವರಾಮ ಹೆಬ್ಬಾರ)
ಕಾರ್ಮಿಕ ಮತ್ತು ಸಕ್ಕರೆ ಸಚಿವರು

ವ ನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ೯ಹೊಂದಿದವರು)

ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 956ಕ್ಕೆ ಅನುಬಂಧ-

ಜಿಲ್ಲಾವಾರು ಸಕ್ಕರೆ ಕಾರ್ಖಾನೆಗಳ ವಿಳಾಸ

| ಕ್ರ. ಸಂ | ಕಾರ್ಖಾನೆಗಳ ಹೆಸರು ಮತ್ತು ವಿಳಾಸ |
|---|---|
| | **ಬೆಳಗಾವಿ ಜಿಲ್ಲೆ** |
| 1. | ಅಥಣಿ ಶುಗರ್ ಲಿ., ವಿಷ್ಣು ಅಣ್ಣಾನಗರ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ |
| 2. | ಲೈಲಾ ಶುಗರ್ಸ್, ಕುಪ್ಪಟಗಿರಿ, ಖಾನಾಪುರ ತಾಲ್ಲೂಕು, ಬೆಳಗಾವಿ ಜಿಲ್ಲೆ (ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು) |
| 3. | ಚಿದಾನಂದ ಬಸಪ್ರಭು ಕೋರೆ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಚಿಕ್ಕೋಡಿ ತಾ॥, ಬೆಳಗಾವಿ ಜಿಲ್ಲೆ |
| 4. | ಇ.ಐ.ಡಿ ಪ್ಯಾರಿ (ಇಂಡಿಯಾ) ಲಿ., ಖಾನ್‌ಪೇಟೆ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ (ಧನಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು) |
| 5. | ಘಟಪ್ರಭಾ ಸಹಕಾರಿ ಸಕ್ಕರೆಕಾರ್ಖಾನೆ ನಿ., ಸಂಗನಕೇರಿ, ಗೋಕಾಕ್ ತಾಲ್ಲೂಕು, ಬೆಳಗಾವಿ ಜಿಲ್ಲೆ |
| 6. | ಗೋಕಾಕ್ ಶುಗರ್ಸ್, ಕೊಳವಿ, ಗೋಕಾಕ್ ತಾಲ್ಲೂಕು, ಬೆಳಗಾವಿ ಜಿಲ್ಲೆ |
| 7. | ಹಾಲಸಿದ್ದನಾಥ ಸಹಕಾರಿ ಸಕ್ಕರೆಕಾರ್ಖಾನೆ ನಿ., ನಿಪ್ಪಾಣಿ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ |
| 8. | ಹಿರಣ್ಯಕೇಶಿ ಸಹಕಾರಿ ಸಕ್ಕರೆಕಾರ್ಖಾನೆ ನಿ., ಸಂಕೇಶ್ವರ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ |
| 9. | ಕೃಷ್ಣಾ ಸಹಕಾರಿ ಸಕ್ಕರೆಕಾರ್ಖಾನೆ ನಿ., ಅಥಣಿ ತಾಲ್ಲೂಕು, ಹಳಿಯಾಳ, ಅಥಣಿ ತಾಲ್ಲೂಕು,ಬೆಳಗಾವಿ ಜಿಲ್ಲೆ |
| 10. | ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಎಂ.ಕೆ. ಹುಬ್ಬಳ್ಳಿ, ಬೈಲಹೊಂಗಲ ತಾಲ್ಲೂಕು, ಬೆಳಗಾವಿ ಜಿಲ್ಲೆ |
| 11. | ಓಂ ಶುಗರ್ಸ್ ಲಿ., ಜೈನಾಪುರ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ |
| 12. | ರೇಣುಕಾ ಶುಗರ್ಸ್, (ರಾಯಬಾಗ್ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು), ಮೇಕಳಿ, ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ. |
| 13. | ರೇಣುಕಾ ಶುಗರ್ಸ್, ಬುರ್ಲಟ್ಟಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ |
| 14. | ರೇಣುಕಾ ಶುಗರ್ಸ್, ಮುನೋಳಿ, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ |
| 15. | ಸತೀಶ್ ಶುಗರ್ಸ್ ಲಿ., ಹುಣಶ್ಯಾಳ, ಗೋಕಾಕ್ ತಾಲ್ಲೂಕು, ಬೆಳಗಾವಿ ಜಿಲ್ಲೆ. |
| 16. | ಶಿರಗುಪ್ಪಿ ಶುಗರ್ ವರ್ಕ್ಸ್ ಲಿ., ಕಾಗ್‌ವಾಡ್, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ |
| 17. | ಸೋಮೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಸಿದ್ದಸಮುದ್ರ, ಬೈಲಹೊಂಗಲ ತಾಲ್ಲೂಕು, ಬೆಳಗಾವಿ ಜಿಲ್ಲೆ |
| 18. | ಶಿವಶಕ್ತಿ ಶುಗರ್ಸ್ ಲಿ., ಸೌಂದತ್ತಿ, ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ |
| 19. | ಉಗಾರ್ ಶುಗರ್ಸ್ ಲಿ., ಉಗಾರ್‌ಖುರ್ದ್, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ |
| 20. | ವೆಂಕಟೇಶ್ವರ ಪವರ್ ಪ್ರಾಜೆಕ್ಟ್ ಲಿ., ಬೇಡ್ಕಿಹಾಳ್, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ. |
| 21. | ವಿಶ್ವರಾಜ್ ಶುಗರ್ಸ್ ಇಂಡಸ್ಟ್ರೀಸ್ ಲಿ., ಬೆಲ್ಲದ ಬಾಗೇವಾಡಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ |
| 22. | ಸೌಭಾಗ್ಯಲಕ್ಷ್ಮಿ ಶುಗರ್ಸ್, ಹಿರೇನಂದಿ, ಗೋಕಾಕ್ ತಾಲ್ಲೂಕು, ಬೆಳಗಾವಿ ಜಿಲ್ಲೆ |
| 23. | ಬೆಳಗಾಂ ಶುಗರ್ಸ್ ಪ್ರೈ.ಲಿ., ಹುಡಲಿ ಗ್ರಾಮ, ಬೆಳಗಾವಿ ತಾಲ್ಲೂಕು & ಜಿಲ್ಲೆ |
| 24. | ಹರ್ಷ ಶುಗರ್ಸ್, ಸೌದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ. |
| | **ಬಾಗಲಕೋಟೆ ಜಿಲ್ಲೆ** |
| 25. | ಬೀಳಗಿ ಶುಗರ್ಸ್ ಲಿ., ಬಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ |
| 26. | ಜೆಮ್ ಶುಗರ್ಸ್ ಲಿ., ಕುಂದರಗಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ |
| 27. | ಗೋದಾವರಿ ಶುಗರ್ಸ್ ಲಿ., ಸಮೀರವಾಡಿ, ಮುಧೋಳ್ ತಾಲ್ಲೂಕು, ಬಾಗಲಕೋಟೆ ಜಿಲ್ಲೆ |

| | |
|---|---|
| 28. | ಇಂಡಿಯನ್ ಕೇನ್ ಪವರ್ ಲಿ., ಉತ್ತೂರ್, ಮುಧೋಳ್ ತಾಲ್ಲೂಕು, ಬಾಗಲಕೋಟೆ ಜಿಲ್ಲೆ |
| 29. | ಜಮಖಂಡಿ ಶುಗರ್ಸ್ ಲಿ., ಹಿರೇಪಡಸಲಗಿ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ |
| 30. | ನಿರಾಣಿ ಶುಗರ್ಸ್ ಲಿ, ಮುಧೋಳ್, ಬಾಗಲಕೋಟೆ ಜಿಲ್ಲೆ. |
| 31. | ಪ್ರಭುಲಿಂಗೇಶ್ವರ ಶುಗರ್ಸ್ ಲಿ., ಸಿದ್ದಾಪುರ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ |
| 32. | ರೈತರ ಸಸಕಾನಿ, ರನ್ನಾನಗರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ |
| 33. | ಇ.ಐ.ಡಿ. ಪ್ಯಾರಿ (ಇಂಡಿಯಾ) ಲಿ., ನಾಗರಾಳ, ನಾಯಿನೇಗಿಲಿ, ಬಾಗಲಕೋಟೆ ತಾಲ್ಲೂಕು ಮತ್ತು ಜಿಲ್ಲೆ |
| 34. | ಶ್ರೀ ಸಾಯಿ ಪ್ರಿಯಾ ಶುಗರ್ಸ್ ಲಿ., ಹಿಪ್ಪರಗಿ-ಮೈಗೂರು, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ |
| 35. | ಎಂ.ಆರ್.ಎನ್ ಕೇನ್ ಪವರ್ ಲಿ., ಕಲ್ಲಾಪುರ (ಎಸ್.ಕೆ) ಬಾಗಲಕೋಟೆ ಜಿಲ್ಲೆ. |
| | **ವಿಜಯಪುರ ಜಿಲ್ಲೆ** |
| 36. | ಇಂಡಿಯನ್ ಶುಗರ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ಲಿ., ಹಾವಿನಾಳ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ |
| 37. | ಜಮಖಂಡಿ ಶುಗರ್ಸ್ ಲಿ., (ಘಟಕ-2) ನಾದ್ ಕೆಡಿ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ |
| 38. | ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಕೃಷ್ಣಾನಗರ, ವಿಜಯಪುರ ತಾಲ್ಲೂಕು ಮತ್ತು ಜಿಲ್ಲೆ |
| 39. | ಕೆ.ಪಿ.ಆರ್. ಶುಗರ್ ಮಿಲ್ ಪ್ರೈ ಲಿ., ಆಲಮೇಲು ಗ್ರಾಮ, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ |
| 40. | ಮನಾಲಿ ಶುಗರ್ಸ್ ಲಿ., ಮಲಘಾನ್, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ |
| 41. | ಶ್ರೀ ಬಸವೇಶ್ವರ ಶುಗರ್ಸ್ ಲಿ., ಕಾರಜೋಳ್, ಬಸವನಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ |
| 42. | ಶ್ರೀ ಬಾಲಾಜಿ ಶುಗರ್ಸ್ & ಕೆಮಿಕಲ್ ಪ್ರೈ. ಲಿ. ಯರಗಲ್, ಮುದ್ದೇಬಿಹಾಳ್ ತಾ॥, ವಿಜಯಪುರ ಜಿಲ್ಲೆ |
| 43. | ಶ್ರೀ ಭೀಮಾಶಂಕರ ಸಸಕಾ ನಿ., ಮರಗೂರು,ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ |
| | **ಉತ್ತರ ಕನ್ನಡ ಜಿಲ್ಲೆ** |
| 44. | ಇ.ಐ.ಡಿ ಪ್ಯಾರಿ (ಇಂಡಿಯಾ) ಲಿ., ಹುಲ್ಲಟ್ಟಿ, ಹಳಿಯಾಳ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ |
| | **ಗದಗ ಜಿಲ್ಲೆ** |
| 45. | ವಿಜಯನಗರ ಶುಗರ್ಸ್ ಲಿ. (ಮೃಢಗಿರಿ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು) ಗಂಗಾಪುರ, ಮುಂಡರಗಿ ತಾಲ್ಲೂಕು, ಗದಗ ಜಿಲ್ಲೆ |
| | **ಹಾವೇರಿ ಜಿಲ್ಲೆ** |
| 46. | ಜಿಎಂ ಶುಗರ್ಸ್ ಲಿ., (ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು) ಸಂಗೂರು, ಹಾವೇರಿ ತಾಲ್ಲೂಕು ಮತ್ತು ಜಿಲ್ಲೆ |
| | **ಬೀದರ್ ಜಿಲ್ಲೆ** |
| 47. | ಭಾಲ್ಕೇಶ್ವರ ಶುಗರ್ಸ್ ಲಿ., ಭಾಜೋಳಗ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ |
| 48. | ಮಹಾತ್ಮಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಹಿಚಕ್‌ಮತ್, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ |
| 49. | ನಾರಂಜಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಇಮಾಂಪುರ, ಬೀದರ್ ತಾಲ್ಲೂಕು ಮತ್ತು ಜಿಲ್ಲೆ |
| 50. | ಬೀದರ್ ಕಿಸಾನ್ ಶಕ್ಕರ್ ಕಾರ್ಖಾನಾ ಲಿ., ಮೊಗ್ದಾಲ್ ಗ್ರಾಮ, ನ್ಯಾಷನಲ್ **ಹೈವೇ ನಂ.9**, ಬೀದರ್ ತಾಲ್ಲೂಕು ಮತ್ತು ಜಿಲ್ಲೆ |
| | **ಕಲಬುರಗಿ ಜಿಲ್ಲೆ** |
| 51. | ಎನ್‌ಎಸ್‌ಎಲ್ ಶುಗರ್ಸ್, ಭೂಸನೂರು, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ (ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು) |
| 52. | ರೇಣುಕಾ ಶುಗರ್ಸ್, ಹವಳಗಾ, ಅಫ್ಜಲ್‌ಪುರ ತಾಲ್ಲೂಕು, ಕಲಬುರಗಿ ಜಿಲ್ಲೆ. |
| 53. | ಉಗಾರ್ ಶುಗರ್ಸ್ ಲಿ., ನಾಗರಹಳ್ಳಿ, ಜೇವರ್ಗಿ ತಾಲ್ಲೂಕು, ಕಲಬುರಗಿ ಜಿಲ್ಲೆ |
| | **ಯಾದಗಿರಿ ಜಿಲ್ಲೆ** |
| 54. | ಕೋರ್ ಗ್ರೀನ್ ಶುಗರ್ಸ್ ಲಿ., ತುಮಕೂರು ಗ್ರಾಮ, ಶಹಪುರ ತಾಲ್ಲೂಕು, ಯಾದಗಿರಿ ಜಿಲ್ಲೆ |
| | **ದಾವಣಗೆರೆ ಜಿಲ್ಲೆ** |
| 55. | ದಾವಣಗೆರೆ ಶುಗರ್ಸ್ ಲಿ., ಕುಕ್ಕವಾಡ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ |

| | |
|---|---|
| 56. | ಶ್ಯಾಮನೂರು ಶುಗರ್ಸ್ ಲಿ., ದುಗ್ಗಾವತಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ |
| | **ಬಳ್ಳಾರಿ ಜಿಲ್ಲೆ** |
| 57. | ಮೈಲಾರ್ ಶುಗರ್ಸ್ ಲಿ., ಬೀರಬ್ಬಿ, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ |
| | **ಮಂಡ್ಯ ಜಿಲ್ಲೆ** |
| 58. | ಚಾಮುಂಡೇಶ್ವರಿ ಶುಗರ್ಸ್ ಲಿ, ಭಾರತಿ ನಗರ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ |
| 59. | ಕೋರಮಂಡಲ್ ಶುಗರ್ಸ್ (ಐಸಿಎಲ್ ಶುಗರ್ಸ್) ಲಿ., ಮಾಕವಳ್ಳಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ |
| 60. | ಎನ್‌ಎಸ್‌ಎಲ್ (ಎಸ್‌ಸಿಎಂ) ಶುಗರ್ಸ್ ಲಿ., ಕೊಪ್ಪ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ |
| | **ಮೈಸೂರು ಜಿಲ್ಲೆ** |
| 61. | ಬನ್ನಾರಿ ಅಮ್ಮನ್ ಶುಗರ್ಸ್ ಲಿ, ಅಳಗಂಚಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ |
| | **ಚಾಮರಾಜನಗರ ಜಿಲ್ಲೆ** |
| 62. | ಬನ್ನಾರಿ ಅಮ್ಮನ್ ಶುಗರ್ಸ್ ಲಿ., ಕುಂತೂರು, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ |

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ
ಸಕ್ಕರೆ ನಿರ್ದೇಶಕರು